ದಿನಾಂಕ 28-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ . ಎಸ್.ವಿ.ಎಂ ವಕೀಲರಿಂದಃ</u>

6. ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದು, ಓದಲು ಬರೆಯಲು ಬರುತ್ತದೆ. ವಾದಿಯು ಈ ದಾವೆಯಲ್ಲಿ ಯಾವ ದಾಖಲೆಗಳನ್ನು ಸಲ್ಲಿಸಿರುತ್ತಾನೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಅಲಿಸಾಬ್ ಹೊಂಡದಕೇರಿ ನನ್ನ ದೊಡ್ಡಪ್ಪ . ಪೀರಸಾಬ ಸಹ ನನ್ನ ದೊಡ್ಡಪ್ಪ. ನನ್ನ ಸದರಿ ಇಬ್ಬರು ದೊಡ್ಡಪ್ಪಂದಿರು ಜಂಟಿಯಾಗಿ ಕೆಲವರಕೊಪ್ಪ ಗ್ರಾಮದ ಸ ನಂ. 112/ಬಿ/3 ವಿಸ್ತೀರ್ಣ 1 ಎಕರೆ 3 ಗುಂಟೆ ಮತ್ತು ಸ ನಂಃ 112/ಎ 1 ಅದರ ಒಟ್ಟು ವಿಸ್ತೀರ್ಣ 3 ಎಕರೆ ಪೈಕಿ 22 ಗುಂಟೆ ಜಮೀನನ್ನು ಮಂಜೂರು ಮಾಡಲು ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯನ್ನು ಮನ್ನಿಸಿ ಭೂ ನ್ಯಾಯ ಮಂಡಳಿಯು ಸದರಿ ಜಮೀನುಗಳನ್ನು ನನ್ನ ದೊಡ್ಡಪ್ಪಂದಿರಿಗೆ ಮಂಜೂರು ಮಾಡಿತ್ತು ಎಂದರೆ ಸರಿ. ಸದರಿ ಮಂಜೂರಿಯಂತೆ ಮೇಲಿನ ಎರಡೂ ಜಮೀನುಗಳನ್ನು ನಾನು ಮತ್ತು ಉಳಿದ ಪ್ರತಿವಾದಿಗಳೆಲ್ಲರೂ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ಪ್ರಸ್ತುತ ಗೋವಿನ ಜೋಳದ ಫಸಲನ್ನು ಬೆಳೆದಿರುತ್ತೇವೆ.

7. ನಿ.ಡಿ-23 ರಿಂದ 26 ರ ಛಾಯಾ ಚಿತ್ರಗಳಲ್ಲಿ ನಾನು ಇರುವುದಿಲ್ಲ. ನಿ.ಡಿ-23 ರಿಂದ 26 ರ ಛಾಯಾ ಚಿತ್ರಗಳಲ್ಲಿ ಕಂಡು ಬರುವ ಜಮೀನುಗಳು ನಾವು ವಹಿವಾಟು ಮಾಡುತ್ತಿರುವ ಹಾಗೂ ನನ್ನ ದೊಡ್ಡಪ್ಪಂದಿರಿಗೆ ಮಂಜೂರು ಆದ ಜಮೀನುಗಳು ಎಂದರೆ ಸರಿ. ಸ ನಂಃ 111/ಬಿ ಜಮೀನಿನ ಒಟ್ಟು ವಿಸ್ತೀರ್ಣದ ಪೈಕಿ 9 ಎಕರೆ ಜಮೀನನ್ನು ಹೊರತುಪಡಿಸಿ ಉಳಿಕೆ ಜಮೀನನ್ನು ಅದರ ಮೂಲ ಮಾಲೀಕರಾದ ಸುಧಾ ಉಪಾಧ್ಯಾಯ ರವರು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಉಳಿಕೆ 39 ಎಕರೆ 2 ಗುಂಟೆ ಜಮೀನನ್ನು ರೈತರು ವಹಿವಾಟು ಮಾಡುತ್ತಿದ್ದು, ಅದು ಗುಡ್ಡಗಾಡಿನ ಪ್ರದೇಶ

ವಾಗಿರುತ್ತದೆ. ಸದರಿ ಕ್ಷೇತ್ರವನ್ನು ವಹಿವಾಟು ಮಾಡುತ್ತಿರುವ ರೈತರ ಹೆಸರು ನನಗೆ ಗೊತ್ತಿಲ್ಲ. ಅವರು ಯಾವ ಆಧಾರದ ಮೇಲೆ ಸದರಿ ಕ್ಷೇತ್ರದ ಜಮೀನನ್ನು ವಹಿವಾಟು ಮಾಡುತ್ತಿದ್ದಾರೆ ಎಂದು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಉಳಿಕೆ 39 ಎಕರೆ 2 ಗುಂಟೆ ಜಮೀನನ್ನು ಸುಧಾ ಉಪಾಧ್ಯಾಯ ಮತ್ತು ಆಕೆಯ ವಾರಸುದಾರರು ವಹಿವಾಟು ಮಾಡುತ್ತಿದ್ದರೂ ರೈತರು ವಹಿವಾಟು ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸ ನಂಃ 111/ಬ ಜಮೀನಿನಲ್ಲಿ ರೈತರು ಸಾಗುವಳಿ ಮಾಡುತ್ತಿರುವ ಜಮೀನನ್ನು ಹೊರತುಪಡಿಸಿ ಉಳಿದ ಜಮೀನು 1951 ರಲ್ಲಿ ಸರಕಾರಕ್ಕೆ



ನಿಹಿತವಾಗಿರುತ್ತದೆ. ಸರಕಾರಕ್ಕೆ ನಿಹಿತವಾದಕ್ಕೆ ಸಂಬಂಧಿಸಿದಂತೆ ಆದ ಡ ಸಂಖ್ಯೆ ನನಗೆ ಗೊತ್ತಿಲ್ಲ. ಸರಕಾರಕ್ಕೆ ನಿಹಿತವಾದ ಆಸ್ತಿಗೆ ಸಂಬಂಧಿಸಿದಂತೆ ನಾನು ಕಂದಾಯ ಆದೇಶಗಳು ಮತ್ತು ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ ನಿಹಿತವಾಗಿರುವ ಜಮೀನನ್ನು ಸರಕಾರವು ಸುಧಾ ಉಪಾಧ್ಯಾಯ ರವರ ಮೂಲ ಪುರುಷರಾದ ಶ್ರೀನಿವಾಸ ದೇಸಾಯಿ, ಹನುಮಂತ ತಿಮ್ಮಾಜಿ ದೇಸಾಯಿ ರವರಿಗೆ ರಿಗ್ರ್ಯಾಂಟ್ ಮಾಡಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ರಿಗ್ರ್ಯಾಂಟ್ ಗೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ.

9. 5 ನೇ ಪ್ರತಿವಾದಿಯು ನನ್ನ ದೊಡ್ಡಪ್ಪ. 5 ನೇ ಪ್ರತಿವಾದಿಯ ಕೆಲವರಕೊಪ್ಪ ಗ್ರಾಮದಲ್ಲಿ ತನ್ನ ಸ್ವಂತ ಆದಾಯ ಮತ್ತು ಗಳಿಕೆಯಿಂದ 10 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಖರೀದಿ ಮಾಡಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ 11-ಇ ಸ್ಕೆಚ್ ನ್ನು ತಯಾರಿಸಲಾಗುತ್ತದೆ ಎಂದರೆ ಸರಿ. ಆ ರೀತಿ 11- ಸ್ಕೆಚನ್ನು ತಯಾರಿಸುವ ಪೂರ್ವದಲ್ಲಿ ಭೂ ಮಾಪಕರು 4 ಆಜು-ಬಾಜುದಾರರಿಗೆ ನೋಟೀಸನ್ನು ನೀಡುತ್ತಾರೆ ಎಂದರೆ ಸರಿ.

10. ನಿ.ಪಿ-22 ರ ದಾಖಲೆಯಲ್ಲಿ ಕಂಡು ಬರುವಂತೆ ಸುಧಾ ಉಪಾಧ್ಯಾಯ ರವರು ನೀಡಿದ ಅರ್ಜಿಯ ಆಧಾರದ ಮೇಲೆ 11-ಇ ಸ್ಕೆಚನ್ನು ಭೂ ಮಾಪಕರು ತಯಾರಿಸಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಆಜು-ಬಾಜುದಾರರಿಗೆ ನೋಟೀಸನ್ನು ನೀಡದೇ ಕಛೇರಿಯಲ್ಲಿಯೇ ತಯಾರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 11-ಇ ಸ್ಕೆಚನ್ನು ನೀಡುವ ಪೂರ್ವದಲ್ಲಿ ಭೂ ಮಾಪಕರು ಆಜು-ಬಾಜುದಾರರಿಗೆ ನೋಟೀಸನ್ನು ನಿಡಿದ ನಂತರ  ಜಮೀನಿಗೆ ಖುದ್ದಾಗಿ ಹಾಜರಾಗಿ ಅಳತೆ ಮಾಡಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-22 ರ 11- ಸ್ಕೆಚ್ ಆದ ನಂತರ ದಾವಾ ಆಸ್ತಿಯನ್ನು ಸುಧಾ



ಉಪಾಧ್ಯಾಯ ರವರು ವಾದಿಯ ಪರವಾಗಿ ನೋಂದಾಯಿತ ಖರೀದಿ ಪತ್ರದಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖರೀದಿ ಪತ್ರವೂ ಸಹ ಕಾನೂನು ಬಾಹಿರದಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ.

11. ಸದರಿ ಖರೀದಿ ಪತ್ರವು ಮತ್ತು 11-ಇ ಸ್ಕೆಚ್ ಕಾನೂನುಬಾಹಿರವಾಗಿರುತ್ತದೆ ಎಂದು ನಾನು ಯಾವುದೇ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಕ್ರಮಗಳನ್ನು ತೆಗೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದವರೆದು ವಾದಿಯು ಖರೀದಿ ಮಾಡಿರುವ ಜಮೀನು ಬೇರೆ ಇದ್ದು ಮತ್ತು ದಾವಾ ಆಸ್ತಿಯು ಬೇರೆ ಇರುವುದರಿಂದ ಯಾವುದೇ ಕ್ರಮವನ್ನು ತೆಗೆದುಕೊಳ್ಳುವ ಅವಶ್ಯಕತೆ ಕಂಡು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸ ನಂ 111/ಬ  ಜಮೀನಿನಲ್ಲಿ ಸುಧಾ ಉಪಾಧ್ಯಾಯ ರವರ ಹಿರಿಯರಿಗೆ ಸರಕಾರವು ರಿಗ್ರ್ಯಾಂಟ್ ಮಾಡಿದ 32 ಎಕರೆ 2 ಗುಂಟೆ ಜಮೀನಿನಲ್ಲಿ ನನಗಾಗಲೀ ಅಥವಾ ಉಳಿದ ಪ್ರತಿವಾದಿಯರಿಗಾಗಲೀ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

12. ದಿಃ 25-05-2016 ರಂದು ದಾವಾ ಆಸ್ತಿಯನ್ನು ವಹಿವಾಟು ಮಾಡಲು

ನಾನು ಮತ್ತು ಉಳಿದ ಪ್ರತಿವಾದಿಗಳು ತೊಂದರೆ ನೀಡಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯನ್ನು ಕಳೆದ 60 ವರ್ಷಗಳಿಂದ ನಾವೇ ವಹಿವಾಟು ಮಾಡುತ್ತಿರುವುದರಿಂದ ವಾದಿಗೆ ತೊಂದರೆ ನೀಡುವ ಅವಶ್ಯಕತೆ ಬರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನಮ್ಮ ಸ್ವಾಧಿನದಲ್ಲಿದ್ದು, ಅದನ್ನು ವಾದಿಯು ಖರೀದಿ ಮಾಡಿರುತ್ತಾನೆಂದು ಸುಳ್ಳು ಹಕ್ಕು ಸಾಧಿಸುತ್ತಿದ್ದಾನೆ.

13. ನನ್ನ ಇಬ್ಬರು ದೊಡ್ಡಪ್ಪಂದಿರಿಗೆ ಸ ನಂಃ 112/ಬಿ3 ರಲ್ಲಿ 1 ಎಕರೆ 3 ಗುಂಟೆ ಮತ್ತು ಸ ನಂಃ 112/ಎ 1 ರಲ್ಲಿ 22 ಗುಂಟೆ ಮಂಜೂರು ಆಗಿರುತ್ತದೆ ಎಂದರೆ ಸರಿ.



ಸಾಕ್ಷಿ ಮುಂದುವರೆದು ನಮಗೆ ಸದರಿ ಜಮೀನುಗಳು ಮಂಜೂರು ಆಗಿದ್ದರೂ ಸಹ ಒಟ್ಟು 4 ಎಕರೆ 3 ಗುಂಟೆ ಜಮೀನನ್ನು ವಹಿವಾಟು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮಂಜೂರಿಯ ಪ್ರಕಾರ ಒಟ್ಟಿಗೆ 1 ಎಕರೆ 25 ಗುಂಟೆ ಮಂಜೂರು ಆಗಿರುತ್ತದೆ ಎಂದರೆ ಸರಿ. 4 ಎಕರೆ 3 ಗುಂಟೆ ಜಮೀನನ್ನು ವಹಿವಾಟು ಮಾಡುತ್ತಿದ್ದೇನೆ ಎಂದು ನುಡಿದಿದ್ದು, ಯಾವ ಆಧಾರದ ಮೇಲೆ ಹೆಚ್ಚಿನ ಜಮೀನನ್ನು ವಹಿವಾಟು ಮಾಡುತ್ತಿದ್ದೀರಿ ಎಂಬ ಸೂಚನೆಗೆ ಸಾಕ್ಷಿಯು ನಮ್ಮ ಹಿರಿಯರ ಕಾಲದಿಂದಲೂ ವಹಿವಾಟು ಮಾಡುತ್ತಿದ್ದಂತೆ ನಾವು ಸಹ ವಹಿವಾಟು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಹೆಚ್ಚುವರಿ ಕ್ಷೇತ್ರಕ್ಕೆ ನಮ್ಮ ಹಿರಿಯರಾಗಲೀ ಅಥವಾ ನಾನಾಗಲೀ ಮಂಜೂರಿ ಕೋರಿ ಭೂ ನ್ಯಾಯ ಮಂಡಳಿಗೆ ಫಾರಂ ನಂಃ7 ಅಥವಾ 7 ಎ ಸಲ್ಲಿಸಿರುವುದಿಲ್ಲ. ಸದರಿ ಹೆಚ್ಚುವರಿ ಕ್ಷೇತ್ರಕ್ಕೆ ಕಂದಾಯವನ್ನು ಕಟ್ಟುತ್ತಿದ್ದೇವೆ. ಕಳೆದ ಸುಮಾರು 30 ವರ್ಷಗಳಿಂದಲೂ ಹೆಚ್ಚುವರಿ ಕ್ಷೇತ್ರಕ್ಕೆ ಕಂದಾಯವನ್ನು ಕಟ್ಟುತ್ತಿದ್ದೇವೆ. ಕಂದಾಯ ಪಾವತಿ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅವಶ್ಯವಿದ್ದಲ್ಲಿ ಹಾಜರುಪಡಿಸುತ್ತೇನೆ.

14. ನಮಗೆ ಮಂಜೂರಾದ ಒಟ್ಟು ಕ್ಷೇತ್ರವಾದ 1 ಎಕರೆ 25 ಗುಂಟೆ ಜಮೀನಿನ ಪೂ- ಮಾಳಣ್ಣನವರ ಜಮೀನು, ಪ- ಸ ನಂಃ 112 ನಂತರ 111 ರ ಕ್ಷೇತ್ರದ ಉಳಿಕೆ ಕ್ಷೇತ್ರ, ಉ-ಸ ನಂಃ 112 ರ ಉಳಿಕೆ ಕ್ಷೇತ್ರ ನಂತರ ಶಿವಪ್ಪ ಮಕರವಳ್ಳಿ ರವರ ವಹಿವಾಟಿನ

ಜಮೀನು ಮತ್ತು ದ- ಮಾಳಣ್ಣನವರ ಜಮೀನು ಇವೆ ಎಂದರೆ ಸರಿ. ದಾವಾ ಆಸ್ತಿಯು ಮೇಲೆ ನಮೂದಿಸಿದ ಚಕ್ಕುಬಂದಿಗಳ ಪೈಕಿ ಪ- ಇರುವ ಸ ನಂಃ 112 ರ ಜಮೀನಿನ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿ. ಸ ನಂಃ 112 ರ ಒಟ್ಟು ಕ್ಷೇತ್ರ ನನಗೆ ಗೊತ್ತಿಲ್ಲ. ಸ ನಂಃ 112 ರಲ್ಲಿ ನಮ್ಮ ಕುಟುಂಬಕ್ಕೆ ಮಂಜೂರಾದ ಒಟ್ಟು 1 ಎಕರೆ 25 ಗುಂಟೆ ಜಮೀನನ್ನು ಹೊರತುಪಡಿಸಿ ಇತರ ರೈತರು ಉಳಿಕೆ ಜಮೀನನ್ನು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಚಕ್ಕುಬಂದಿಯ ನಡುವೆ ಇರುವ 1 ಎಕರೆ 25 ಗುಂಟೆ ಜಮೀನನ್ನು ನಾನು, ಉಳಿದ ಪ್ರತಿವಾದಿಯರು ವಹಿವಾಟು ಮಾಡುತ್ತಿದ್ದೇವೆ ಎಂದರೆ ಸರಿ.

-14-

15. ನಾವು ವಹಿವಾಟಿಸುತ್ತಿರುವ ಸದರಿ ಜಮೀನು ಸಹ ಗುಡ್ಡದ ಪ್ರದೇಶದಲ್ಲಿಯೇ ಇದೆ ಎಂದರೆ ಸಾಕ್ಷಿಯು ಗುಡ್ಡದ ಕೆಳಗಡೆ ಇದ್ದು, ಸಮತಟ್ಟಾಗಿ ಇದೆ ಎಂದು ನುಡಿಯುತ್ತಾರೆ. ನಮಗೆ ಮಂಜೂರು ಮಾಡಿದ ನಂತರ ವಹಿವಾಟಿಸುತ್ತಿರುವ ಜಮೀನು ಗುಡ್ಡಗಾಡು ಪ್ರದೇಶ ಇದ್ದು ನಂತರದಲ್ಲಿ ಸಮತಟ್ಟು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸ ನಂಃ 112 ರ ಮೂಲ ಮಾಲೀಕರ ಜಮೀನುಗಳು ಗುಡ್ಡದ ಜಮಿನುಗಳು ಎಂದು ಪ್ರಸಿದ್ಧಿ ಪಡೆದಿವೆ ಎಂದರೆ ಸರಿ. ಸದರಿ ಗುಡ್ಡದ ಜಮೀನುಗಳಲ್ಲಿ ಅದರ ಸ್ವಾಧೀನದಾರರು ಜೋಳವನ್ನು ಮತ್ತು ಹತ್ತಿಯನ್ನು ಹೊರತುಪಡಿಸಿ ಬೇರೆ ಫಸಲನ್ನು ಬೆಳೆಯಲು ಸಾಧ್ಯವಿಲ್ಲ ಎಂದರೆ ಸರಿ. ಬೇರೆ ಬೆಳೆಗಳನ್ನು ಬೆಳೆಯಲು ಸಾಧ್ಯವಿಲ್ಲದೇ ಇರುವುದರಿಂದ ಪ್ರತಿವಾದಿಗಳು ಮತ್ತು ಅದೇ ರೀತಿ ವಾದಿಯು ಸಹ ಜೋಳದ ಫಸಲನ್ನು ಬೆಳೆದಿರುತ್ತಾರೆ ಎಂದರೆ ಸರಿ.

16. ಸುಧಾಬಾಯಿ ಉಪಾಧ್ಯಾಯರವರು ಕೆಲವರಕೊಪ್ಪ ಗ್ರಾಮಕ್ಕೆ ಹೋಗಿಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ಸ ನಂಃ 110 ಬ ಮತ್ತು 111 ಬ ಜಮೀನುಗಳನ್ನು ಮಾರಾಟ ಮಾಡುವ ಪೂರ್ವದಲ್ಲಿ ಅವುಗಳ ಮಲೀಕರಾದ ಸುಧಾಬಾಯಿ ಉಪಾಧ್ಯಾಯರವರು ಅವುಗಳನ್ನು ಮಾರಾಟ ಮಾಡುತ್ತಿದ್ದು, ಆಸಕ್ತಿವುಳ್ಳವರು

ಖರೀಧಿಸಬಹುದೆಂದು ನಿ.ಪಿ-24 ಮತ್ತು 25 ರಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದರು ಎಂದರೆ ಸರಿ. ಅದರಂತೆ ಸುಧಾಬಾಯಿ ಉಪಾಧ್ಯಾಯರವರು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿಯಂತೆ ವಾದಿಯು ದಾವಾ ಆಸ್ತಿಯನ್ನು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಹಿವಾಟು ಮಾಡುತ್ತಿದ್ದರೂ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗಾಗಲೀ ಅಥವಾ ಉಳಿದ ಪ್ರತಿವಾದಿಯರಿ-ಗಾಗಲೀ ಹಕ್ಕು ಮತ್ತು ಹಿತಾಸಕ್ತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-15-

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**SD/-**
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ